# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 746(918) |
| 2. | ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 15-12-2025 |
| 4. | ಉತ್ತರಿಸುವ ಸಚಿವರು | : | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಎಷ್ಟು ಯುಜಿ ವೈದ್ಯಕೀಯ ಸೀಟ್‌ಗಾಗಿ ಪರೀಕ್ಷೆ ನಡೆಸಿತ್ತು; ಇದರಲ್ಲಿ ಅಂಗವಿಕಲರಿಗೆ ಮೀಸಲಾಗಿದ್ದ ಸೀಟ್‌ಗಳ ಸಂಖ್ಯೆ ಎಷ್ಟು; | UG NEET ಪರೀಕ್ಷೆಯನ್ನು National Testing Agency ರವರು ನಡೆಸುತ್ತಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನೀಟ್ ಪರೀಕ್ಷೆಯನ್ನು ನಡೆಸುವುದಿಲ್ಲ.<br>2025ನೇ ಸಾಲಿನಲ್ಲಿ ವಿಶೇಷ ಚೇತನರಿಗೆ ಮೀಸಲಾಗಿದ್ದ ಯುಜಿ ವೈದ್ಯಕೀಯ ಸೀಟುಗಳ ಸಂಖ್ಯೆ:263. |
| ಆ) | ಮೂಲ ಅರ್ಜಿಯಲ್ಲಿ ಎಷ್ಟು ಅಭ್ಯರ್ಥಿಗಳು ಮೀಸಲಾತಿಯನ್ನು ಕೋರಿದ್ದರು ಹಾಗೂ ಎಷ್ಟು ಅಭ್ಯರ್ಥಿಗಳು ನಂತರ ತಿದ್ದುಪಡಿ ಮಾಡಿ ಮೀಸಲಾತಿಯನ್ನು ಕೋರಿದ್ದರು; | 2025ನೇ ಸಾಲಿನಲ್ಲಿ ಅಂಗವಿಕಲ ಕೋಟಾದಡಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ:951.<br><br>ಪ್ರತಿ ವರ್ಷವೂ ಅಭ್ಯರ್ಥಿಗಳ ಅನುಕೂಲಕ್ಕಾಗಿ ಅರ್ಜಿಯಲ್ಲಿನ ಮಾಹಿತಿಯನ್ನು ತಿದ್ದುಪಡಿ (Editing Options) ಮಾಡಿಕೊಳ್ಳಲು ಸಾಕಷ್ಟು ಬಾರಿ ಅವಕಾಶವನ್ನು ನೀಡಲಾಗುತ್ತದೆ. |
| ಇ) | ಅಂಗವಿಕಲ ಪ್ರಮಾಣ ಪತ್ರವನ್ನು ನೀಡಲು ಅನುಸರಿಸಬೇಕಾದ ಕ್ರಮವೇನು: ನಡೆಸಬೇಕಾದ ಪರೀಕ್ಷೆಗಳು ಯಾವುವು: | ಆಯಾ ಜಿಲ್ಲೆಗಳ ವೈದ್ಯಕೀಯ ಮಂಡಳಿಯವರು ಅಭ್ಯರ್ಥಿಗಳ ವಿಕಲಚೇತನದ ಬಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಿ, ಪ್ರಮಾಣ ಪತ್ರ ನೀಡುತ್ತಾರೆ.<br><br>UDID Card ಅನ್ನು ಕಡ್ಡಾಯವಾಗಿ ಅಭ್ಯರ್ಥಿಯು ಪಡೆಯಬೇಕಾಗಿರುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಹ ವಿಶೇಷ ಚೇತನ ಅಭ್ಯರ್ಥಿಗಳಿಗೆ ವೈದ್ಯಕೀಯ ತಜ್ಞರಿಂದ ವೈದ್ಯಕೀಯ ತಪಾಸಣೆಯನ್ನು ನಡೆಸುತ್ತದೆ ಮತ್ತು ಆ ವರದಿಯನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. |

| | | |
|---|---|---|
| ಈ) | ನಕಲಿ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿ ಎಷ್ಟು ಜನ ಅಭ್ಯರ್ಥಿಗಳು ಸೀಟ್ ಪಡೆದಿದ್ದರು; ಅವರು ಯಾವ ಯಾವ ಕಾಲೇಜಿನಲ್ಲಿ ಸೀಟ್ ಪಡೆದಿದ್ದಾರೆ: ಸದರಿ ಅಭ್ಯರ್ಥಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು: | 2025ನೇ ಸಾಲಿನಲ್ಲಿ ವಿಶೇಷ ಚೇತನ ಮೀಸಲಾತಿ ಅಡಿ (ಶ್ರವಣದೋಷ) ವೈದ್ಯಕೀಯ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಕೆಲವು ಅಭ್ಯರ್ಥಿಗಳು ಸಿಇಟಿ 2006ರ ಪ್ರಕಾರ ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ವಿಕ್ಟೋರಿಯಾ ಆಸ್ಪತ್ರೆಯ ಗೌಪ್ಯ ಪತ್ರ ದಿನಾಂಕ:01-09-2025ರಂತೆ 21 ಅಭ್ಯರ್ಥಿಗಳು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡದೆ ನಕಲಿ ಆಡಿಯೋಗ್ರಾಂ ಬೇರಾ ವರದಿಗಳನ್ನು ಸಲ್ಲಿಸಿರುತ್ತಾರೆಂದು ಮಾಹಿತಿ ಬಂದಿದ್ದರಿಂದ ಅವರನ್ನು ಸೀಟು ಹಂಚಿಕೆಯಿಂದ ಕೈಬಿಡಲಾಗಿದೆ. ಆದ್ದರಿಂದ ಸದರಿ ಅಭ್ಯರ್ಥಿಗಳಿಗೆ ಯಾವ ವೈದ್ಯಕೀಯ ಸೀಟು ಹಂಚಿಕೆಯಾಗಿರುವುದಿಲ್ಲ. ಹಾಗೂ ಇಬ್ಬರು ಅಭ್ಯರ್ಥಿಗಳು ಮತ್ತು ಮೂರು ಜನ ಅಭ್ಯರ್ಥಿಗಳ ಪೋಷಕರು ನೀಡಿದ ಮನವಿ ಪತ್ರಗಳ ಪ್ರಕಾರ ದಿನಾಂಕ:08-09-2025ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿಯವರು ಮಲ್ಲೇಶ್ವರಂ ಪೊಲೀಸ್ ಠಾಣೆಗೆ ದೂರು ನೀಡಿದ್ದು, (ಅಪರಾಧ ಸಂಖ್ಯೆ-160/25) ಸದರಿ ದೂರಿನ ಬಗ್ಗೆ ತನಿಖೆ ಪ್ರಗತಿಯಲ್ಲಿರುತ್ತದೆ. ತನಿಖಾ ವರದಿಯು ಬಂದ ನಂತರ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು. |
| ಉ) | ನಕಲಿ ಪ್ರಮಾಣ ಪತ್ರ ನೀಡಿದ ವೈದ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? | |
| ಊ) | ಈ ರೀತಿಯ ವಂಚನೆಗಳನ್ನು ತಡೆಯಲು ಸರ್ಕಾರ ಕೈಗೊಳ್ಳುವ ಕ್ರಮವೇನು? | ನಕಲಿ ಪ್ರಮಾಣ ಪತ್ರ ನೀಡಿ ಸೀಟು ಹಂಚಿಕೆ ಪಡೆದ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕ್ಕದ್ದಮೆ ದಾಖಲಿಸಲಾಗುವುದು ಹಾಗೂ ಹಂಚಿಕೆಯಾದ ಸೀಟನ್ನು ರದ್ದು ಪಡಿಸಲಾಗುವುದು. ನಕಲಿ ಪ್ರಮಾಣ ಪತ್ರ ನೀಡಿದ ಅಧಿಕಾರಿ/ವೈದ್ಯರುಗಳ ವಿರುದ್ಧ ಸಹ ಶಿಸ್ತು ಕ್ರಮ ಜರುಗಿಸಲಾಗುವುದು. |

**ಕಡತ ಸಂಖ್ಯೆ:**ಎಂಇಡಿ 412 ಆರ್‌ಜಿಯು 2025

**(ಡಾ:ಶರಣ ಪ್ರಕಾಶ್ ಆರ್.ಪಾಟೀಲ)**
ವೈದ್ಯಕೀಯ ಶಿಕ್ಷಣ, ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು